ಕರ್ನಾಟಕ ಸರ್ಕಾರ

# ಭ್ರಷ್ಟಾಚಾರ ನಿಗ್ರಹ ದಳ

ದಿನಾಂಕ: 09.04.2019

## ಪತ್ರಿಕಾ ಪ್ರಕಟಣೆ

ಬೆಂಗಳೂರು ನಗರದ ರಿಯಲ್ ಎಸ್ಟೇಟ್ ಏಜೆಂಟ್‌ರೊಬ್ಬರು 2013ನೇ ಇಸವಿಯಲ್ಲಿ ಮಾಗಡಿಯಲ್ಲಿ ಕೆಲವರಿಗೆ ನಿವೇಶನಗಳನ್ನು ಮಾರಾಟ ಮಾಡಿರುತ್ತಾರೆ. ಸದರಿ ನಿವೇಶನಗಳ ವಿಚಾರದಲ್ಲಿ ತಕರಾರುಗಳಿದ್ದ ಕಾರಣ ಖರೀದಿಸಿದ್ದ ನಿವೇಶನದಾರರು ತಮ್ಮ ನಿವೇಶನವನ್ನು ಮರುಮಾರಾಟ ಮಾಡಿಕೊಡುವಂತೆ ದೂರುದಾರರಿಗೆ ಕೋರಿರುತ್ತಾರೆ. ನಂತರ ಈ ಹಿಂದೆ ಮಾಗಡಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ.ವಿ.ಎಸ್.ಶಬರೀಶ್, ಪೊಲೀಸ್ ಇನ್ಸ್‌ಪೆಕ್ಟರ್ ರವರನ್ನು ನಿವೇಶನದಾರರು ಸಂಪರ್ಕಿಸಿದ್ದರು. ವಿಚಾರಣೆ ನಡೆಸಿದ ಶ್ರೀ.ವಿ.ಎಸ್.ಶಬರೀಶ್, ಪೊಲೀಸ್ ಇನ್ಸ್‌ಪೆಕ್ಟರ್ ರವರು ಕೆಂಗೇರಿ ಸಂಚಾರ ಪೊಲೀಸ್ ಠಾಣೆಗೆ ವರ್ಗಾವಣೆಗೊಂಡಿರುತ್ತಾರೆ. ಆದರೂ ಸಹ ಶ್ರೀ.ವಿ.ಎಸ್.ಶಬರೀಶ್, ಪೊಲೀಸ್ ಇನ್ಸ್‌ಪೆಕ್ಟರ್ ಬೆಂಗಳೂರು ಹಾಗೂ ಶ್ರೀ.ಹುಲ್ಲುರಯ್ಯ, ಖಾಸಗಿ ವ್ಯಕ್ತಿ ರವರುಗಳು ದೂರುದಾರರಿಂದ ಮರುನೋಂದಣಿ ಮಾಡಿ ನಿವೇಶನದಾರರಿಗೆ ಹಣವನ್ನು ಹಿಂದಿರುಗಿಸುವಂತೆ ಹಾಗೂ ಇದರ ಜೊತೆಗೆ ತಮ್ಮಿಬ್ಬರುಗಳಿಗೆ ₹ 15 ಲಕ್ಷ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ: 09.04.2019 ರಂದು ಶ್ರೀ.ವಿ.ಎಸ್.ಶಬರೀಶ್ ಹಾಗೂ ಶ್ರೀ.ಹುಲ್ಲುರಯ್ಯ ರವರು ದೂರುದಾರರಿಂದ ₹ 7 ಲಕ್ಷ ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ಠಾಣೆಯ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿರುತ್ತಾರೆ. ಇವರಿಬ್ಬರನ್ನು ದಸ್ತಗಿರಿ ಮಾಡಿ ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ, ಪ್ರಕರಣದ ತನಿಖೆ ಮುಂದುವರೆದಿದೆ.